INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -6, November-December, 2025
Page No,115-126
Peer -Reviewed, Refereed Journal

# ಯಳಂದೂರು ತಾಲೂಕಿನ ಕೆರೆಕಟ್ಟೆಗಳ ನಿರ್ಮಾಣ ಮತ್ತು ನಿರ್ವಹಣೆ ಕುರಿತ ವಿಶ್ಲೇಷಣೆ

*.ಮುರಳಿ.ಎಂ.[1]
**.ಪ್ರೊ.ಜಿ.ಕರಿಯಪ್ಪ.[2]

**ದಕ್ಷಿಣ** ಕರ್ನಾಟಕದ ಚಾಮರಾಜನಗರ ಜಿಲ್ಲೆಯ ಪ್ರದೇಶವು ಭೌಗೋಳಿಕವಾಗಿ ಒಣ ಮತ್ತು ಅರೆ–ಒಣಭೂಮಿ ಪ್ರದೇಶಕ್ಕೆ ಸೇರಿದ್ದು, ಮಳೆಯ ಅಸ್ಥಿರತೆ ಹಾಗೂ ನದೀ ನೀರಿನ ಸೀಮಿತ ಲಭ್ಯತೆಯ ನೆಲೆ ಮತ್ತು ಹಿನ್ನೆಲೆಯಲ್ಲಿ ಕೆರೆಕಟ್ಟೆಗಳು ಗ್ರಾಮೀಣ ಬದುಕಿನ ಜೀವನಾಡಿಗಳಾಗಿ ರೂಪುಗೊಂಡಿವೆ. ಪ್ರಾಚೀನ ಕಾಲಮಾನದಿಂದಲೂ ಇಲ್ಲಿ ನಿರ್ಮಿಸಲಾದ ಕೆರೆಗಳು ಕೇವಲ ನೀರಿನ ಸಂಗ್ರಹಣಾ ವ್ಯವಸ್ಥೆಗಳಾಗಿರದೆ, ಕೃಷಿ ಆರ್ಥಿಕತೆಯ ಆಧಾರ, ಪಶುಸಂಗೋಪನೆಯ ನೆರವು ಮತ್ತು ಗ್ರಾಮೀಣ ಜನಸಮಾಜದ ಬದುಕಿನ ನಿರಂತರತೆಯನ್ನು ಕಾಯ್ದುಕೊಂಡ ಪ್ರಮುಖ ಸಂಸ್ಥೆಗಳಾಗಿವೆ. ಯಳಂದೂರು ಮತ್ತು ತಾಲ್ಲೂಕಿ ಕೆರೆಕಟ್ಟೆಗಳು ಗ್ರಾಮೀಣ ಜನಸಮುದಾಯದ ಸಾಮಾಜಿಕ ಸಂಘಟನೆಯನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿರುತ್ತದೆ. ಕೆರೆಗಳ ನಿರ್ಮಾಣ, ಸಂರಕ್ಷಣೆ ಮತ್ತು ನಿರ್ವಹಣೆ ಜನಸಮುದಾಯ ಆಧಾರಿತ ಚಟುವಟಿಕೆಯಾಗಿದ್ದು, ಇದರಲ್ಲಿ ಗ್ರಾಮ ಸಭೆಗಳು, ಹಿರಿಯರು ಮತ್ತು ರೈತ ಸಮುದಾಯಗಳು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಈ ಪ್ರಕ್ರಿಯೆಯು ಸಹಕಾರ, ಪರಸ್ಪರ ಅವಲಂಬನೆ ಮತ್ತು ಸಾಮಾಜಿಕ ನ್ಯಾಯದ ಮೌಲ್ಯಗಳನ್ನು ಬೆಳೆಸಿದ ಸಾಮಾಜಿಕ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸಿದೆ. ಹೀಗಾಗಿ ಕೆರೆಕಟ್ಟೆಗಳು ಕೇವಲ ಭೌತಿಕ ಜಲಸಂಪನ್ಮೂಲಗಳಲ್ಲದೆ, ಗ್ರಾಮೀಣ ಸಮಾಜದ ಶಿಸ್ತು ಮತ್ತು ಸಂಸ್ಕೃತಿಯನ್ನು ರೂಪಿಸಿದ ಸಾಮಾಜಿಕ ಸಂಸ್ಥೆಗಳಾಗಿವೆ. ಕೆರೆಗಳು ನೈಸರ್ಗಿಕ ತಗ್ಗು ಪ್ರದೇಶಗಳ ಆಯ್ಕೆ, ಮಣ್ಣಿನ ಬಂಡ್‌ಗಳ ನಿರ್ಮಾಣ, ಕಲ್ಲಿನ ತೂಬುಗಳು ಮತ್ತು ಕಾಲುವೆಗಳ ಜಾಲ ಇವುಗಳೆಲ್ಲವೂ ಸ್ಥಳೀಯ ಪರಿಸರ ಜ್ಞಾನ ಮತ್ತು ಅನುಭವದ ಫಲವಾಗಿರುತ್ತವೆ. ಈ ತಂತ್ರಜ್ಞಾನವು ಪರಿಸರ ಸ್ನೇಹಿಯಾಗಿದ್ದು, ದೀರ್ಘಕಾಲಿಕ ಬಳಕೆಗೆ ಅನುಕೂಲವಾಗಿತ್ತು ಎಂಬುದು ತಿಳಿದುಬರುತ್ತದೆ. ಇದೇ ಅಲ್ಲದೇ ಕೆರೆಕಟ್ಟೆಗಳಿಗೆ ಸಂಬಂಧಿಸಿದ ಜನಪದ ನಂಬಿಕೆಗಳು, ಹಬ್ಬ–ಜಾತ್ರೆಗಳು, ಮಳೆಗಾಗಿ ನಡೆಯುವ ಪೂಜೆಗಳು ಮತ್ತು ಹರಕೆಗಳಂತಹ ಸಾಂಸ್ಕೃತಿಕ ಆಚರಣೆಗಳನ್ನು ವಿಶ್ಲೇಷಿಸಲಾಗುತ್ತದೆ. ಕೆರೆಯ ತೀರದಲ್ಲಿ ನಡೆಯುವ ಗ್ರಾಮ

1. ಸಂಶೋಧಕರು,ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು.
2 .ಪ್ರಾಧ್ಯಾಪಕರು(ವಿಶ್ರಾಂತ) ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು.

ದೇವತೆಗಳ ಆರಾಧನೆಯೂ ಕೆರೆಕಟ್ಟೆಗಳು ಗ್ರಾಮೀಣ ಸಂಸ್ಕೃತಿಯ ಕೇಂದ್ರಗಳಾಗಿದ್ದುದನ್ನು ತೋರಿಸುತ್ತವೆ. ಜನಪದ ಗೀತೆಗಳು, ಗಾದೆಗಳು ಮತ್ತು ಆಚರಣೆಗಳಲ್ಲಿ ಕೆರೆಗಳ ಮಹತ್ವ ಪ್ರತಿಬಿಂಬಿತವಾಗಿರುವುದು ಈ ಸಂಸ್ಕೃತಿಯ ಆಳವನ್ನು ಸೂಚಿಸುತ್ತದೆ. ಇದೇ ಸಂದರ್ಭದಲ್ಲಿ, ಸಮಕಾಲೀನ ಕಾಲಘಟ್ಟದಲ್ಲಿ ಕೆರೆಕಟ್ಟೆಗಳು ಎದುರಿಸುತ್ತಿರುವ ಸವಾಲುಗಳನ್ನೂ ಈ ಅಧ್ಯಯನವೂ ವಿಶ್ಲೇಷಿಸುತ್ತದೆ. ನಗರೀಕರಣ, ಭೂ ಅತಿಕ್ರಮಣ, ನಿರ್ವಹಣೆಯ ಕೊರತೆ ಮತ್ತು ಸಾಂಪ್ರದಾಯಿಕ ಜ್ಞಾನ ಕ್ಷೀಣತೆಗಳಿಂದ ಅನೇಕ ಕೆರೆಗಳು ಅಸ್ತಿತ್ವ ಕಳೆದುಕೊಳ್ಳುತ್ತಿರುವುದು ಗಂಭೀರ ಸಮಸ್ಯೆಯಾಗಿದೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಪಾರಂಪರಿಕ ಸಮುದಾಯ ಆಧಾರಿತ ನಿರ್ವಹಣಾ ವ್ಯವಸ್ಥೆ ಮತ್ತು ಆಧುನಿಕ ವೈಜ್ಞಾನಿಕ ತಂತ್ರಜ್ಞಾನಗಳ ಸಮನ್ವಯದ ಅಗತ್ಯವನ್ನು ಗುರುತಿಸಲಾಗಿದೆ. ಒಟ್ಟಿನಲ್ಲಿ ಯಳಂದೂರು ತಾಲ್ಲೂಕಿನ ಕೆರೆಕಟ್ಟೆ ಸಂಸ್ಕೃತಿಯ ಅಧ್ಯಯನವು ದಕ್ಷಿಣ ಕರ್ನಾಟಕದ ಗ್ರಾಮೀಣ ಬದುಕಿನ ಐತಿಹಾಸಿಕ ನಿರಂತರತೆ, ಸಾಮಾಜಿಕ ರಚನೆ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯತೆಗಳನ್ನು ಅರ್ಥಮಾಡಿಕೊಳ್ಳಲು ಮಹತ್ವದ ಕೊಡುಗೆಯಾಗಿರುತ್ತದೆ.

ಯಳಂದೂರು ತಾಲೂಕು ಭೌಗೋಳಿಕವಾಗಿ ಒಣ ಮತ್ತು ಅರೆ–ಒಣ ಪ್ರದೇಶಕ್ಕೆ ಸೇರಿದ್ದು, ಇಲ್ಲಿನ ಹವಾಮಾನ ಸ್ವಭಾವತಃ ಮಳೆಯ ಅಸ್ಥಿರತೆಯಿಂದ ಕೂಡಿರುತ್ತದೆ. ವಾರ್ಷಿಕ ಮಳೆಯ ಪ್ರಮಾಣ ಕಡಿಮೆಯಾಗಿರುವುದರ ಜೊತೆಗೆ, ಅದು ಸಮಪ್ರಮಾಣದಲ್ಲಿ ಬೀಳದೆ ಇರುವುದರಿಂದ ಕೃಷಿ ಚಟುವಟಿಕೆಗಳು ಬಹುತೇಕ ಮಳೆಯ ಅವಲಂಬಿತವಾಗಿದ್ದವು. ನದೀ ನೀರಿನ ಶಾಶ್ವತ ಲಭ್ಯತೆ ಇಲ್ಲದ ಈ ಪ್ರದೇಶದಲ್ಲಿ, ನೀರಿನ ಸಂಗ್ರಹಣೆ ಮತ್ತು ಸಮರ್ಪಕ ನಿಯಂತ್ರಣವು ಗ್ರಾಮೀಣ ಬದುಕಿನ ಅತ್ಯಂತ ಮೂಲಭೂತ ಹಾಗೂ ಸವಾಲಿನ ಪ್ರಶ್ನೆಯಾಗಿ ಪರಿಣಮಿಸಿತ್ತು. ಕುಡಿಯುವ ನೀರು, ಕೃಷಿ ನೀರಾವರಿ ಮತ್ತು ಪಶುಸಂಗೋಪನೆಗೆ ಅಗತ್ಯವಾದ ನೀರನ್ನು ಒದಗಿಸುವುದಕ್ಕಾಗಿ ಪರ್ಯಾಯ ವ್ಯವಸ್ಥೆಗಳನ್ನು ರೂಪಿಸುವುದು ಅನಿವಾರ್ಯವಾಗಿತ್ತು. ಈ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಯಳಂದೂರು ತಾಲೂಕಿನಾದ್ಯಂತ ಕೆರೆಕಟ್ಟೆಗಳ ನಿರ್ಮಾಣ ಒಂದು ಅಗತ್ಯವಾದ ಸಾಮಾಜಿಕ ಹಾಗೂ ತಾಂತ್ರಿಕ ಚಟುವಟಿಕೆಯಾಗಿಯಾಗಿ ರೂಪುಗೊಂಡಿತು. ಕೆರೆಕಟ್ಟೆಗಳ ನಿರ್ಮಾಣ ಕೇವಲ ವೈಯಕ್ತಿಕ ಅಥವಾ ಆಡಳಿತಾತ್ಮಕ ಕಾರ್ಯವಾಗಿರದೆ, ಜನಸಮುದಾಯದ ಸಾಮೂಹಿಕ ಜವಾಬ್ದಾರಿಯಂತೆ ಪರಿಗಣಿಸಲ್ಪಟ್ಟಿತು. ಸ್ಥಳೀಯ ಭೌಗೋಳಿಕ ಪರಿಸ್ಥಿತಿ, ಮಣ್ಣಿನ ಸ್ವಭಾವ ಮತ್ತು ಮಳೆಯ ಹರಿವಿನ ಮಾರ್ಗಗಳನ್ನು ಗಮನದಲ್ಲಿಟ್ಟು, ನೈಸರ್ಗಿಕ ತಗ್ಗು ಪ್ರದೇಶಗಳಲ್ಲಿ ಕೆರೆಗಳನ್ನು ನಿರ್ಮಿಸುವ ಜ್ಞಾನವು ತಲೆಮಾರುಗಳಿಂದ ಸಂಗ್ರಹವಾಗಿತ್ತು. ಹೀಗಾಗಿ ಕೆರೆಕಟ್ಟೆಗಳು ಸ್ಥಳೀಯ ಪರಿಸರ ಜ್ಞಾನ ಮತ್ತು ಮಾನವ ಶ್ರಮದ ಸಂಯೋಜನೆಯ ಫಲವಾಗಿವೆ. ಯಳಂದೂರು ತಾಲೂಕಿನ ಕೆರೆಕಟ್ಟೆಗಳ ನಿರ್ಮಾಣದಲ್ಲಿ ಬಳಸಲಾದ ವಿಧಾನಗಳು ಸರಳವಾಗಿದ್ದರೂ, ಅವು ಅತ್ಯಂತ ಪರಿಣಾಮಕಾರಿ ಮತ್ತು ಪರಿಸರ ಸ್ನೇಹಿಯಾಗಿದ್ದವು. ಮಣ್ಣಿನ ಬಂಡ್‌ಗಳು, ಕಲ್ಲಿನ ತೂಬುಗಳು, ನೀರಿನ ಹರಿವನ್ನು ನಿಯಂತ್ರಿಸುವ ಕಾಲುವೆಗಳ ಜಾಲ ಇವುಗಳೆಲ್ಲವೂ ಸ್ಥಳೀಯ ತಾಂತ್ರಿಕ

ನಿಪುಣತೆಯ ಉದಾಹರಣೆಗಳಾಗಿವೆ. ಈ ತಂತ್ರಜ್ಞಾನವು ಕಡಿಮೆ ಸಂಪನ್ಮೂಲಗಳಲ್ಲಿ ಹೆಚ್ಚು ಪ್ರಯೋಜನ ಪಡೆಯುವ ಗ್ರಾಮೀಣ ಜಲ ನಿರ್ವಹಣಾ ಮಾದರಿಯಾಗಿದೆ. ಇದಕ್ಕೂ ಮಿಕ್ಕಾಗಿ, ಕೆರೆಕಟ್ಟೆಗಳ ನಿರ್ವಹಣೆ ಸಂಪೂರ್ಣವಾಗಿ ಸಾಂಪ್ರದಾಯಿಕ ಸಮುದಾಯ ಆಧಾರಿತ ವ್ಯವಸ್ಥೆಯಡಿ ನಡೆಯುತ್ತಿತ್ತು. ಗ್ರಾಮ ಸಭೆಗಳು, ಹಿರಿಯರು ಮತ್ತು ರೈತ ಸಮುದಾಯಗಳು ನೀರಿನ ಹಂಚಿಕೆ, ಕೆರೆ ತೊಳೆಯುವ ಕಾರ್ಯ, ಬಂಡ್ ದುರಸ್ತಿ ಮತ್ತು ನಿರ್ವಹಣಾ ನಿಯಮಗಳ ಅನುಷ್ಠಾನದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು. ಈ ವ್ಯವಸ್ಥೆಯು ಸಹಕಾರ, ಸಮಾನತೆ ಮತ್ತು ಸಾಮಾಜಿಕ ಹೊಣೆಗಾರಿಕೆಯ ಮೌಲ್ಯಗಳನ್ನು ಬೆಳೆಸಿದುದಲ್ಲದೆ, ಗ್ರಾಮೀಣ ಸಮಾಜದ ಶಿಸ್ತು ಮತ್ತು ಏಕತೆಯನ್ನು ಬಲಪಡಿಸಿತು. ಈ ಅಧ್ಯಾಯದಲ್ಲಿ ಯಳಂದೂರು ತಾಲೂಕಿನ ಕೆರೆಕಟ್ಟೆಗಳ ನಿರ್ಮಾಣ ವಿಧಾನಗಳು, ಅವುಗಳಲ್ಲಿ ಅಡಕವಾಗಿರುವ ತಾಂತ್ರಿಕ ಅಂಶಗಳು ಹಾಗೂ ಸಾಂಪ್ರದಾಯಿಕ ನಿರ್ವಹಣಾ ವ್ಯವಸ್ಥೆಗಳ ಸಮಗ್ರ ಅಧ್ಯಯನ ಮಾಡುವ ಮೂಲಕ ಈ ಕೆರೆಕಟ್ಟೆಗಳು ಗ್ರಾಮೀಣ ಬದುಕಿನ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿರತೆಗೆ ಹೇಗೆ ಆಧಾರವಾಗಿದ್ದವು ಎಂಬುದನ್ನು ಗುರುತಿಸಲಾಗಿದೆ.

ಯಳಂದೂರು ತಾಲೂಕಿನ ಕೆರೆಕಟ್ಟೆಗಳ ನಿರ್ಮಾಣಕ್ಕೆ ಹಲವು ಪರಸ್ಪರ ಸಂಬಂಧಿತ ಪರಿಸರ, ಆರ್ಥಿಕ ಮತ್ತು ಸಾಮಾಜಿಕ ಕಾರಣಗಳು ಹಿನ್ನೆಲೆಯಾಗಿವೆ. ಮೊದಲನೆಯದಾಗಿ; ಈ ಪ್ರದೇಶದಲ್ಲಿ ಮಳೆಯ ಅಸಮ ವಿತರಣೆಯ ಸಮಸ್ಯೆ ಅತ್ಯಂತ ಗಂಭೀರವಾಗಿತ್ತು. ವಾರ್ಷಿಕ ಮಳೆಯ ಪ್ರಮಾಣ ಕಡಿಮೆಯಾಗಿರುವುದರ ಜೊತೆಗೆ, ಮಳೆ ನಿರ್ದಿಷ್ಟ ಕಾಲಘಟ್ಟದಲ್ಲಿ ಮಾತ್ರ ಬೀಳುತ್ತಿದ್ದುದರಿಂದ ಕೃಷಿಗೆ ಅವಶ್ಯಕವಾದ ನೀರಿನ ನಿರಂತರ ಲಭ್ಯತೆ ಸಾಧ್ಯವಾಗುತ್ತಿರಲಿಲ್ಲ. ಈ ಅಸಮತೋಲನವನ್ನು ಸಮರ್ಥವಾಗಿ ನಿರ್ವಹಿಸುವ ಸಲುವಾಗಿ ಮಳೆನೀರನ್ನು ಸಂಗ್ರಹಿಸಿ ಬಳಸುವ ವ್ಯವಸ್ಥೆಯ ಅಗತ್ಯತೆ ಉಂಟಾಯಿತು. ಎರಡನೆಯದಾಗಿ; ಯಳಂದೂರು ತಾಲೂಕಿನಲ್ಲಿ ನದೀ ನೀರಿನ ಶಾಶ್ವತ ಲಭ್ಯತೆ ಕಡಿಮೆಯಾಗಿರುವುದು ಪ್ರಮುಖ ಕಾರಣವಾಗಿದೆ. ಪ್ರಮುಖ ನದಿಗಳ ಹರಿವು ಈ ಪ್ರದೇಶದಲ್ಲಿ ಸೀಮಿತವಾಗಿದ್ದು, ಅವುಗಳ ನೀರು ವರ್ಷಪೂರ್ತಿ ಲಭ್ಯವಿರದ ಕಾರಣ ಕೃಷಿ ಹಾಗೂ ದೈನಂದಿನ ಜೀವನಕ್ಕೆ ನದಿಗಳ ಮೇಲೆ ಅವಲಂಬಿಸಿಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ, ಸ್ಥಳೀಯ ಮಟ್ಟದಲ್ಲೇ ನೀರಿನ ಸಂಗ್ರಹಣೆ ಮತ್ತು ನಿಯಂತ್ರಣ ವ್ಯವಸ್ಥೆಗಳನ್ನು ರೂಪಿಸುವುದು ಅನಿವಾರ್ಯವಾಯಿತು. ಮೂರನೆಯದಾಗಿ; ಕೃಷಿ, ಪಶುಸಂಗೋಪನೆ ಮತ್ತು ಕುಡಿಯುವ ನೀರಿನ ಅಗತ್ಯ ಯಳಂದೂರು ತಾಲೂಕಿನ ಗ್ರಾಮೀಣ ಸಮಾಜದ ಆರ್ಥಿಕ ಬದುಕಿನ ಕೇಂದ್ರಬಿಂದುವಾಗಿತ್ತು. ಮಳೆಯ ಅವಲಂಬಿತ ಕೃಷಿಯಲ್ಲಿ ಅಪಾಯ ಹೆಚ್ಚಾಗಿದ್ದರಿಂದ, ಕೆರೆಕಟ್ಟೆಗಳ ಮೂಲಕ ನೀರಾವರಿ ವ್ಯವಸ್ಥೆಯನ್ನು ರೂಪಿಸುವುದು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ಸಹಾಯಕವಾಯಿತು. ಅಲ್ಲದೆ, ಪಶುಸಂಗೋಪನೆಗೆ ಅಗತ್ಯವಾದ ನೀರು ಮತ್ತು ಗ್ರಾಮಸ್ಥರ ದೈನಂದಿನ ಕುಡಿಯುವ ನೀರಿನ ಅವಶ್ಯಕತೆಯನ್ನು ಪೂರೈಸುವಲ್ಲಿ ಕೆರೆಗಳು

ಮಹತ್ವದ ಪಾತ್ರ ವಹಿಸಿವೆ. ನಾಲ್ಕನೆಯದಾಗಿ; ಸಮುದಾಯದ ಆರ್ಥಿಕ ಸ್ವಾವಲಂಬನೆ ಯಳಂದೂರು ತಾಲೂಕಿನ ಕೆರೆಕಟ್ಟೆಗಳ ನಿರ್ಮಾಣದ ಹಿಂದೆ ಅಡಗಿರುವ ಪ್ರಮುಖ ಸಾಮಾಜಿಕ ಕಾರಣವಾಗಿದೆ. ಸ್ಥಳೀಯ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು, ಹೊರಗಿನ ಅವಲಂಬನೆಯನ್ನು ಕಡಿಮೆ ಮಾಡುವುದು ಗ್ರಾಮೀಣ ಸಮಾಜದ ಆಶಯವಾಗಿತ್ತು. ಕೆರೆಕಟ್ಟೆಗಳು ಕೃಷಿ ಮತ್ತು ಸಂಬಂಧಿತ ಉದ್ಯೋಗಗಳಿಗೆ ಆಧಾರ ಒದಗಿಸುವ ಮೂಲಕ ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸಿದವು. ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲೇ ಯಳಂದೂರು ತಾಲೂಕಿನ ಕೆರೆಕಟ್ಟೆಗಳ ನಿರ್ಮಾಣವನ್ನು ಕೇವಲ ಒಂದು ತಾಂತ್ರಿಕ ಅಥವಾ ಆಡಳಿತಾತ್ಮಕ ಕಾರ್ಯವೆಂದು ನೋಡದೆ, ಸಮಾಜದ ಸಾಮೂಹಿಕ ಜವಾಬ್ದಾರಿಯಂತೆ ಪರಿಗಣಿಸಲಾಗುತ್ತಿತ್ತು. ಕೆರೆಗಳ ನಿರ್ಮಾಣ, ಸಂರಕ್ಷಣೆ ಮತ್ತು ನಿರ್ವಹಣೆ ಗ್ರಾಮಸ್ಥರ ಸಾಮೂಹಿಕ ಶ್ರಮ ಮತ್ತು ಸಹಕಾರದ ಫಲವಾಗಿದ್ದು, ಇದು ಗ್ರಾಮೀಣ ಸಮಾಜದಲ್ಲಿ ಸಾಮಾಜಿಕ ಏಕತೆ, ಪರಸ್ಪರ ಅವಲಂಬನೆ ಮತ್ತು ಹೊಣೆಗಾರಿಕೆಯ ಮೌಲ್ಯಗಳನ್ನು ಗಟ್ಟಿಗೊಳಿಸಿತು.

**ಕೆರೆಕಟ್ಟೆಗಳ ನಿರ್ಮಾಣ ವಿಧಾನಗಳು:** ಯಳಂದೂರು ತಾಲೂಕಿನ ಕೆರೆಕಟ್ಟೆಗಳ ನಿರ್ಮಾಣ ವಿಧಾನಗಳು ಸ್ಥಳೀಯ ಪರಿಸರ ಜ್ಞಾನ, ಭೌಗೋಳಿಕ ಅರಿವು ಮತ್ತು ತಲೆಮಾರುಗಳಿಂದ ಸಾಗಿಬಂದ ಅನುಭವದ ಫಲವಾಗಿವೆ. ಇವು ಸರಳವಾಗಿದ್ದರೂ ದೀರ್ಘಕಾಲಿಕ ಬಳಕೆಗೆ ಅನುಕೂಲವಾಗುವಂತೆ ಹಾಗೂ ಪರಿಸರಕ್ಕೆ ಹೊಂದಿಕೊಂಡು ರೂಪುಗೊಂಡಿದ್ದವು. ಕೆರೆ ನಿರ್ಮಾಣದ ಪ್ರತಿಯೊಂದು ಹಂತದಲ್ಲಿಯೂ ಪ್ರಕೃತಿಯ ಸಹಜ ಸ್ವಭಾವವನ್ನು ಗೌರವಿಸುವ ದೃಷ್ಟಿಕೋನ ಸ್ಪಷ್ಟವಾಗಿ ಕಾಣುತ್ತದೆ. ಕೆರೆ ನಿರ್ಮಾಣದ ಪ್ರಥಮ ಮತ್ತು ಅತ್ಯಂತ ಪ್ರಮುಖ ಹಂತವೆಂದರೆ; ಯಳಂದೂರು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಕೆರೆಗಳನ್ನು ಸಾಮಾನ್ಯವಾಗಿ ನೈಸರ್ಗಿಕ ತಗ್ಗು ಪ್ರದೇಶಗಳಲ್ಲಿ ಹಾಗೂ ಮಳೆನೀರು ಸಹಜವಾಗಿ ಹರಿದು ಸೇರುವ ಸ್ಥಳಗಳಲ್ಲಿ ನಿರ್ಮಿಸಲಾಗುತ್ತಿತ್ತು. ಭೂಪ್ರಕೃತಿಯ ಇಳಿಜಾರಿನ ಸ್ವಭಾವ, ಮಣ್ಣಿನ ಬಗೆ, ನೀರಿನ ಹರಿವಿನ ದಿಕ್ಕು ಮತ್ತು ಮಳೆನೀರಿನ ಸಂಗ್ರಹಣೆಯ ಸಾಧ್ಯತೆಯನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿತ್ತು. ಈ ಪ್ರಕ್ರಿಯೆಯಲ್ಲಿ ಸ್ಥಳೀಯ ಹಿರಿಯರ ಅನುಭವ ಮತ್ತು ಜನಪದ ಜ್ಞಾನ ಪ್ರಮುಖ ಪಾತ್ರವಹಿಸುತ್ತಿತ್ತು. ತಪ್ಪಾದ ಸ್ಥಳ ಆಯ್ಕೆ ಕೆರೆಗಳ ಅಸ್ತಿತ್ವಕ್ಕೆ ಅಪಾಯಕಾರಿಯಾಗಬಹುದು ಎಂಬ ಅರಿವು ಗ್ರಾಮೀಣ ಸಮಾಜದಲ್ಲಿ ಗಟ್ಟಿಯಾಗಿ ನೆಲೆಸಿತ್ತು. ಕೆರೆಗಳ ಪ್ರಮುಖ ಮತ್ತು ಅತೀ ಅವಶ್ಯಕ ಅಂಶವಾದ ಬಂಡ್‌ಗಳನ್ನು ಸಾಮಾನ್ಯವಾಗಿ ಮಣ್ಣಿನಿಂದ ನಿರ್ಮಿಸಲಾಗುತ್ತಿತ್ತು. ಬಂಡ್ ನಿರ್ಮಾಣದಲ್ಲಿ ಮಣ್ಣು ಮುಖ್ಯ ವಸ್ತುವಾಗಿದ್ದರೂ, ಅದರ ಸ್ಥಿರತೆಯನ್ನು ಹೆಚ್ಚಿಸಲು ಕಲ್ಲುಗಳನ್ನು ಮತ್ತು ಕೆಲವೆಡೆ ಮರದ ಅಡ್ಡಗೋಡೆಗಳನ್ನು ಸಹ ಬಳಸಲಾಗುತ್ತಿತ್ತು. ಬಂಡ್‌ನ ಅಗಲ ಮತ್ತು ಎತ್ತರವನ್ನು ನಿರ್ಧರಿಸುವಾಗ ಮಳೆಯ ಪ್ರಮಾಣ, ಕೆರೆಯ ನೀರಿನ ಸಂಗ್ರಹಣಾ ಸಾಮರ್ಥ್ಯ ಮತ್ತು ನೀರಿನ ಒತ್ತಡವನ್ನು ಗಮನದಲ್ಲಿಟ್ಟುಕೊಳ್ಳಲಾಗುತ್ತಿತ್ತು. ಬಂಡ್ ಬಲವಾಗಿರಬೇಕೆಂಬುದು ಕೇವಲ ತಾಂತ್ರಿಕ ಅವಶ್ಯಕತೆಯಲ್ಲದೆ,

ಕೆರೆಗಳ ದೀರ್ಘಕಾಲಿಕ ಸ್ಥಿರತೆಯ ಸಂಕೇತವಾಗಿತ್ತು. ಹೀಗಾಗಿ ಬಂಡ್ ನಿರ್ಮಾಣವು ಸಮುದಾಯದ ಸಾಮೂಹಿಕ ಶ್ರಮದೊಂದಿಗೆ ನಡೆಯುತ್ತಿದ್ದ ಮಹತ್ವದ ಕಾರ್ಯವಾಗಿತ್ತು. ಕೆರೆ ನೀರನ್ನು ಸಮರ್ಪಕವಾಗಿ ನಿಯಂತ್ರಿಸಿ ಬಳಸಲು ಕಲ್ಲಿನ ತೂಬುಗಳನ್ನು ನಿರ್ಮಿಸಲಾಗುತ್ತಿತ್ತು. ಈ ತೂಬುಗಳ ಮೂಲಕ ಕೆರೆಯಲ್ಲಿನ ನೀರಿನ ಮಟ್ಟವನ್ನು ನಿಯಂತ್ರಿಸುವುದು ಹಾಗೂ ಅವಶ್ಯಕತೆಗನುಗುಣವಾಗಿ ನೀರನ್ನು ಹೊರಹರಿಸುವುದು ಸಾಧ್ಯವಾಗುತ್ತಿತ್ತು. ತೂಬುಗಳಿಂದ ಹೊರಬರುವ ನೀರನ್ನು ಕೃಷಿ ಭೂಮಿಗಳಿಗೆ ತಲುಪಿಸಲು ಕಾಲುವೆಗಳ ಜಾಲವನ್ನು ನಿರ್ಮಿಸಲಾಗುತ್ತಿತ್ತು. ಈ ಕಾಲುವೆಗಳು ಭೂಪ್ರಕೃತಿಯ ಇಳಿಜಾರನ್ನು ಅನುಸರಿಸಿ ರೂಪುಗೊಂಡಿದ್ದು, ನೀರಿನ ವ್ಯರ್ಥವನ್ನು ಕಡಿಮೆ ಮಾಡುವಲ್ಲಿ ಸಹಕಾರಿಯಾಗಿದ್ದವು. ಈ ಸಂಪೂರ್ಣ ವ್ಯವಸ್ಥೆ ಸ್ಥಳೀಯ ತಾಂತ್ರಿಕ ಜ್ಞಾನದ, ಪರಿಸರ ಅರಿವಿನ ಮತ್ತು ಅನುಭವಾಧಾರಿತ ಜಲ ನಿರ್ವಹಣಾ ತಂತ್ರಜ್ಞಾನದ ಅತ್ಯುತ್ತಮ ಉದಾಹರಣೆಯಾಗಿದೆ.

**ಕೆರೆಕಟ್ಟೆಗಳ ನಿರ್ವಹಣೆ:** ಯಳಂದೂರು ತಾಲೂಕಿನ ಕೆರೆಕಟ್ಟೆಗಳ ವೈಶಿಷ್ಟ್ಯತೆಯು ಅವುಗಳ ನಿರ್ಮಾಣಕ್ಕಿಂತಲೂ ಹೆಚ್ಚಾಗಿ ಅವುಗಳ ನಿರ್ವಹಣಾ ವ್ಯವಸ್ಥೆಯಲ್ಲಿ ಕಂಡುಬರುತ್ತದೆ. ಈ ನಿರ್ವಹಣೆ ಯಾವುದೇ ಕೇಂದ್ರಿತ ಆಡಳಿತ ವ್ಯವಸ್ಥೆಯ ಅವಲಂಬನೆಯಲ್ಲದೆ, ಸ್ಥಳೀಯ ಜನಸಮುದಾಯದ ಜವಾಬ್ದಾರಿ ಮತ್ತು ಪಾಲ್ಗೊಳ್ಳುವಿಕೆಯ ಮೇಲೆ ಆಧಾರಿತವಾಗಿತ್ತು. ಕೆರೆಗಳನ್ನು ಕೇವಲ ನೀರಿನ ಸಂಗ್ರಹಣೆಯ ಮೂಲವಾಗಿ ಮಾತ್ರವಲ್ಲದೆ, ಸಮೂಹ ಜೀವನದ ಕೇಂದ್ರಬಿಂದುವಾಗಿ ಗ್ರಾಮೀಣ ಜನಸಮಾಜ ಪರಿಗಣಿಸಿತ್ತು. ಯಳಂದೂರು ತಾಲೂಕಿನ ಕೆರೆಗಳ ನಿರ್ವಹಣೆ ಸಂಪೂರ್ಣವಾಗಿ ಸಮುದಾಯ ಆಧಾರಿತ ವ್ಯವಸ್ಥೆಯಾಗಿ ರೂಪುಗೊಂಡಿತ್ತು. ಸಾಮೂಹಿಕ ಸಭೆಯು ಈ ವ್ಯವಸ್ಥೆಯ ಪ್ರಮುಖ ಅಂಗವಾಗಿದ್ದು, ಕೆರೆಗಳಿಗೆ ಸಂಬಂಧಿಸಿದ ಎಲ್ಲ ತೀರ್ಮಾನಗಳು ಇಲ್ಲಿ ಚರ್ಚೆಗೊಳಪಡುತ್ತಿದ್ದವು. ಕೆರೆಯ ಸ್ಥಿತಿ, ನೀರಿನ ಸಂಗ್ರಹ ಪ್ರಮಾಣ, ಬಂಡ್‌ಗಳ ಸುರಕ್ಷತೆ, ತೂಬುಗಳ ದುರಸ್ತಿ ಹಾಗೂ ಕಾಲುವೆಗಳ ಶುದ್ಧೀಕರಣದಂತಹ ವಿಷಯಗಳಲ್ಲಿ ಸಾಮೂಹಿಕ ಒಪ್ಪಿಗೆಯ ಮೂಲಕ ನಿರ್ಧಾರಗಳು ಕೈಗೊಳ್ಳಲಾಗುತ್ತಿತ್ತು. ಪ್ರತಿಯೊಬ್ಬ ಗ್ರಾಮಸ್ಥನೂ ಕೆರೆಯನ್ನು ತನ್ನದೇ ಆಸ್ತಿಯಂತೆ ನೋಡಿಕೊಳ್ಳಬೇಕೆಂಬ ಸಾಮಾಜಿಕ ಮನೋಭಾವನೆ ಇದ್ದುದರಿಂದ, ನಿರ್ವಹಣೆಯ ಹೊಣೆಗಾರಿಕೆ ವ್ಯಕ್ತಿಗತವಲ್ಲದೆ ಸಾಮೂಹಿಕ ಕರ್ತವ್ಯವಾಗಿತ್ತು. ಜನಸಮುದಾಯದೊಳಗೆ ಶಿಸ್ತು, ಸಹಕಾರ ಮತ್ತು ಪರಸ್ಪರ ಹೊಣೆಗಾರಿಕೆ ಬೆಳೆದಿತ್ತು. ಕೆರೆಗಳ ನಿರ್ವಹಣೆಯಲ್ಲಿ ಅತ್ಯಂತ ಪ್ರಮುಖವಾದ ಅಂಶವೆಂದರೆ; ಪ್ರತಿವರ್ಷ ಮಳೆಗಾಲ ಆರಂಭವಾಗುವ ಮುನ್ನ ಕೆರೆಗಳ ತಳಪಾಯದಲ್ಲಿ ಜಮೆಯಾಗಿದ್ದ ಮಣ್ಣು, ಕಸ ಮತ್ತು ಸಸ್ಯಾವಶೇಷಗಳನ್ನು ತೆಗೆದುಹಾಕುವ ಕಾರ್ಯವೂ ನಡೆಯುತ್ತಿತ್ತು. ಈ ಕಾರ್ಯವನ್ನು ಗ್ರಾಮಸ್ಥರು ಸಾಮೂಹಿಕ ಶ್ರಮದಾನದ ಮೂಲಕ ನೆರವೇರಿಸುತ್ತಿದ್ದರು. ಕೆರೆ ತೊಳೆಯುವ ಕಾರ್ಯವು ಕೇವಲ ನಿರ್ವಹಣಾ ಕ್ರಮವಲ್ಲದೆ, ಸಾಮಾಜಿಕ ಸೌಹಾರ್ದತೆ ಮತ್ತು ಏಕತೆಯ ಪ್ರತೀಕವಾಗಿತ್ತು. ತೊಳೆಯುವ

ವೇಳೆ ತೆಗೆದ ಮಣ್ಣನ್ನು ಸಮೀಪದ ಕೃಷಿಭೂಮಿಗಳಿಗೆ ಸಾಗಿಸಿ ಬಳಸಲಾಗುತ್ತಿತ್ತು. ಈ ಮಣ್ಣು ಸಾವಯವ ಪದಾರ್ಥಗಳಿಂದ ಸಮೃದ್ಧವಾಗಿದ್ದುದರಿಂದ, ಬೆಳೆ ಉತ್ಪಾದನೆಗೆ ಸಹಾಯಕವಾಗುತ್ತಿತ್ತು. ಹೀಗಾಗಿ, ಕೆರೆ ತೊಳೆಯುವ ಪ್ರಕ್ರಿಯೆ ನೀರಿನ ಸಂರಕ್ಷಣೆ ಮತ್ತು ಕೃಷಿ ಅಭಿವೃದ್ಧಿ ಎರಡಕ್ಕೂ ಸಹಕಾರಿಯಾಗಿತ್ತು. ಯಳಂದೂರು ತಾಲೂಕಿನ ಕೆರೆ ವ್ಯವಸ್ಥೆಯಲ್ಲಿ ನೀರಿನ ಹಂಚಿಕೆಗಾಗಿ ಕಟ್ಟುನಿಟ್ಟಾದ ಮತ್ತು ಸ್ಪಷ್ಟ ನಿಯಮಗಳು ಇದ್ದವು. ಕೆರೆಯಿಂದ ನೀರು ಪಡೆಯುವ ಹಕ್ಕು ಮತ್ತು ಸಮಯವನ್ನು ಗ್ರಾಮಸಭೆ ನಿರ್ಧರಿಸುತ್ತಿತ್ತು. ಎಲ್ಲಾ ರೈತರಿಗೆ ಸಮಾನ ಅವಕಾಶ ದೊರೆಯುವಂತೆ, ನೀರನ್ನು ಸಮಯ ಆಧಾರಿತವಾಗಿ ಅಥವಾ ನಿರ್ದಿಷ್ಟ ಪ್ರಮಾಣದಲ್ಲಿ ಹಂಚಲಾಗುತ್ತಿತ್ತು. ನೀರಿನ ದುರುಪಯೋಗ ಅಥವಾ ನಿಯಮ ಉಲ್ಲಂಘನೆಯು ಕಂಡುಬಂದಲ್ಲಿ, ಸಂಬಂಧಿಸಿದ ವ್ಯಕ್ತಿಗೆ ದಂಡ ಅಥವಾ ಸಾಮಾಜಿಕ ಶಿಕ್ಷೆ ವಿಧಿಸುವ ವ್ಯವಸ್ಥೆಯೂ ಇತ್ತು. ಈ ನಿಯಮಗಳು ನೀರಿನ ವ್ಯರ್ಥವನ್ನು ತಡೆದು, ಬರಗಾಲದ ಸಂದರ್ಭದಲ್ಲೂ ಸಮನ್ಯಾಯ ಹಂಚಿಕೆಗೆ ಸಹಾಯ ಮಾಡುತ್ತಿದ್ದವು.

**ಆಧುನಿಕ ಕಾಲದ ಬದಲಾವಣೆಗಳು:** ಯಳಂದೂರು ತಾಲೂಕಿನ ಕೆರೆಕಟ್ಟೆಗಳ ಇತಿಹಾಸದಲ್ಲಿ ಸ್ವಾತಂತ್ರ್ಯೋತ್ತರ ಕಾಲಮಾನವು ಮಹತ್ವದ ತಿರುವಿನ ಹಂತವಾಗಿದ್ದು, ಈ ಅವಧಿಯಲ್ಲಿ ಕೆರೆಗಳ ನಿರ್ಮಾಣ ಮತ್ತು ನಿರ್ವಹಣಾ ವ್ಯವಸ್ಥೆಯಲ್ಲಿ ಆಧುನಿಕ ಆಡಳಿತಾತ್ಮಕ ಬದಲಾವಣೆಗಳು ಪ್ರವೇಶಿಸಿದವು. ಪರಂಪರೆಯಿಂದ ನಡೆದುಕೊಂಡು ಬಂದ ಜನಸಮುದಾಯ ಆಧಾರಿತ ವ್ಯವಸ್ಥೆಗೆ ಬದಲಾಗಿ, ಸರ್ಕಾರಿ ನೀರಾವರಿ ಇಲಾಖೆ, ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ವಿವಿಧ ಅಭಿವೃದ್ಧಿ ಯೋಜನೆಗಳು ಕೆರೆ ನಿರ್ವಹಣೆಯ ಹೊಣೆಗಾರಿಕೆಯನ್ನು ಕ್ರಮೇಣ ವಹಿಸಿಕೊಳ್ಳಲು ಆರಂಭಿಸಿದವು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕೃಷಿ ವಿಸ್ತರಣೆ ಮತ್ತು ಆಹಾರ ಭದ್ರತೆ ಎಂಬ ಗುರಿಗಳನ್ನು ಮುಂಚೂಣಿಗೆ ತಂದ ಪರಿಣಾಮ, ದೊಡ್ಡ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ದೊರೆಯಿತು. ಇದರೊಂದಿಗೆ ಕೆರೆಗಳು ಮತ್ತು ಸಣ್ಣ ನೀರಾವರಿ ವ್ಯವಸ್ಥೆಗಳು ಕೆಲವೊಮ್ಮೆ ನಿರ್ಲಕ್ಷ್ಯಕ್ಕೆ ಒಳಗಾದವು. ಆದರೂ, ಕೆಲವು ಪ್ರದೇಶಗಳಲ್ಲಿ ಸರ್ಕಾರದ ಹಸ್ತಕ್ಷೇಪದಿಂದ ಕೆರೆಗಳ ಪುನಶ್ಚೇತನ, ಬಂಡ್‌ಗಳ ಬಲಪಡಿಕೆ, ತೂಬುಗಳ ನವೀಕರಣ ಮತ್ತು ಕಾಲುವೆಗಳ ದುರಸ್ತಿ ಕಾರ್ಯಗಳು ನಡೆಯಿತು. ಈ ಕ್ರಮಗಳು ಕೆರೆಗಳ ಭೌತಿಕ ಸ್ಥಿತಿಯನ್ನು ಸುಧಾರಿಸಲು ಸಹಾಯ ಮಾಡಿದ್ದವು. ಆದರೆ, ಈ ಆಡಳಿತಾತ್ಮಕ ಬದಲಾವಣೆಗಳೊಂದಿಗೆ ಜನಸಮುದಾಯದ ನೇರ ಪಾಲ್ಗೊಳ್ಳುವಿಕೆ ಕ್ರಮೇಣ ಕುಂಠಿತವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಮೊದಲು ಗ್ರಾಮಸ್ಥರು ಸ್ವಯಂಪ್ರೇರಿತವಾಗಿ ಕೈಗೊಳ್ಳುತ್ತಿದ್ದ ನಿರ್ವಹಣಾ ಕಾರ್ಯಗಳು, ಈಗ ಸರ್ಕಾರಿ ಅನುದಾನ ಮತ್ತು ಅಧಿಕೃತ ಆದೇಶಗಳ ಮೇಲೆ ಅವಲಂಬಿತವಾಗಿವೆ. ಇದರ ಪರಿಣಾಮವಾಗಿ, ಕೆರೆಗಳೊಂದಿಗೆ ಇದ್ದ ಭಾವನಾತ್ಮಕ ಮತ್ತು ಸಾಮಾಜಿಕ ಸಂಬಂಧಗಳು ನಿಧಾನವಾಗಿ ಸಡಿಲಗೊಂಡಿವೆ. ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಸ್ಥಳೀಯ ಆಡಳಿತಕ್ಕೆ ಕೆಲವು ಅಧಿಕಾರಗಳು ನೀಡಲ್ಪಟ್ಟಿದ್ದರೂ, ತಾಂತ್ರಿಕ ಜ್ಞಾನ,

ಹಣಕಾಸು ಮಿತಿಗಳು ಮತ್ತು ಆಡಳಿತಾತ್ಮಕ ವಿಳಂಬಗಳು ಪರಿಣಾಮಕಾರಿ ನಿರ್ವಹಣೆಗೆ ಅಡ್ಡಿಯಾಗಿವೆ. ಜೊತೆಗೆ, ಗ್ರಾಮೀಣ ಸಮಾಜದಲ್ಲಿ ಉದ್ಯೋಗ ಮಾದರಿಗಳ ಬದಲಾವಣೆ, ನಗರೀಕರಣದ ಪ್ರಭಾವ ಮತ್ತು ಕೃಷಿಯ ಮೇಲಿನ ಅವಲಂಬನೆಯ ಕುಸಿತವು ಸಮುದಾಯದ ಭಾಗವಹಿಸುವಿಕೆಯನ್ನು ಮತ್ತಷ್ಟು ಕಡಿಮೆ ಮಾಡಿದೆ. ಇತ್ತೀಚಿನ ದಶಕಗಳಲ್ಲಿ ಜಲ ಸಂರಕ್ಷಣೆಯ ಮಹತ್ವದ ಬಗೆಗೆ ಪುನಃ ಜಾಗೃತಿ ಮೂಡಿದ ಪರಿಣಾಮ, ಕೆರೆ ಪುನಶ್ಚೇತನ ಯೋಜನೆಗಳು, ಜನಸಹಭಾಗಿತ್ವ ಆಧಾರಿತ ಮಾದರಿಗಳು ಮತ್ತು ಸ್ವಯಂಸೇವಾ ಸಂಸ್ಥೆಗಳ ಪಾತ್ರ ಗಮನಾರ್ಹವಾಗಿದೆ. ಆದರೂ, ಪರಂಪರ ಜ್ಞಾನ ಮತ್ತು ಆಧುನಿಕ ಆಡಳಿತದ ನಡುವೆ ಸಮನ್ವಯ ಸಾಧಿಸುವುದು ಇನ್ನೂ ಸವಾಲಾಗಿಯೇ ಉಳಿದಿದೆ. ಈ ಹಿನ್ನೆಲೆಯಲ್ಲಿ ಯಳಂದೂರು ತಾಲೂಕಿನ ಕೆರೆಕಟ್ಟೆಗಳ ಭವಿಷ್ಯವು ಕೇವಲ ತಾಂತ್ರಿಕ ಹಸ್ತಕ್ಷೇಪಗಳಲ್ಲದೆ, ಜನಸಮುದಾಯ ಆಡಳಿತ ಸಹಭಾಗಿತ್ವದ ಪುನರ್ ಸ್ಥಾಪನೆಗೆ ಅವಲಂಬಿತವಾಗಿದೆ. ಪರಂಪರ ನಿರ್ವಹಣಾ ತತ್ವಗಳನ್ನು ಆಧುನಿಕ ವ್ಯವಸ್ಥೆಯೊಂದಿಗೆ ಸಂಯೋಜಿಸುವ ಮೂಲಕ ಮಾತ್ರ ಕೆರೆಗಳು ದೀರ್ಘಕಾಲಿಕವಾಗಿ ಜೀವಂತವಾಗಿರಲು ಸಾಧ್ಯವಾಗಿರುತ್ತದೆ.

**ಸವಾಲುಗಳು ಮತ್ತು ಸಮಸ್ಯೆಗಳು:** ಯಳಂದೂರು ತಾಲೂಕಿನ ಕೆರೆಕಟ್ಟೆಗಳು ಶತಮಾನಗಳ ಕಾಲ ಗ್ರಾಮೀಣ ಜನರ ಬದುಕಿನ ಆಧಾರವಾಗಿದ್ದರೂ, ಇತ್ತೀಚಿನ ದಶಕಗಳಲ್ಲಿ ಹಲವು ಸಂಕೀರ್ಣ ಸವಾಲುಗಳನ್ನು ಎದುರಿಸುತ್ತಿವೆ. ಈ ಸವಾಲುಗಳು ಕೇವಲ ಭೌತಿಕ ಮಟ್ಟಕ್ಕೆ ಸೀಮಿತವಾಗಿರದೆ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆಡಳಿತಾತ್ಮಕ ಆಯಾಮಗಳನ್ನೂ ಒಳಗೊಂಡಿವೆ. ಕೆರೆ ಸಂಸ್ಕೃತಿಯ ದೀರ್ಘಕಾಲಿಕ ಸ್ಥಿತಿಸ್ಥಾಪಕತೆಗೆ ಈ ಸಮಸ್ಯೆಗಳು ಗಂಭೀರ ಧಕ್ಕೆಯನ್ನು ಉಂಟುಮಾಡಿವೆ. ಯಳಂದೂರು ತಾಲೂಕಿನ ಅನೇಕ ಕೆರೆಗಳು ಇಂದು ಭೂ ಅತಿಕ್ರಮಣದ ಸಮಸ್ಯೆಗೆ ಒಳಗಾಗಿವೆ. ಜನಸಂಖ್ಯೆಯ ಒತ್ತಡ, ವಸತಿ ವಿಸ್ತರಣೆ, ಕೃಷಿ ಭೂಮಿಯ ಅಗತ್ಯ ಮತ್ತು ಆಡಳಿತಾತ್ಮಕ ನಿರ್ಲಕ್ಷ್ಯತೆಗಳ ಪರಿಣಾಮವಾಗಿ ಕೆರೆಗಳ ಗಡಿಗಳನ್ನು ಅತಿಕ್ರಮಿಸಲಾಗಿದೆ. ಕೆರೆಗಳ ಸುತ್ತಲಿನ ಹಳ್ಳ, ಕಾಲುವೆ ಮತ್ತು ನೀರು ಹರಿವಿನ ಮಾರ್ಗಗಳು ಮುಚ್ಚಲ್ಪಡುವುದರಿಂದ ಮಳೆನೀರು ಕೆರೆಗೆ ಸೇರುವ ಪ್ರಕ್ರಿಯೆ ಅಡ್ಡಿಯಾಗುತ್ತಿದೆ. ಇದರ ಪರಿಣಾಮವಾಗಿ ಕೆರೆಗಳ ನೀರಿನ ಹಿಡಿತ ಸಾಮರ್ಥ್ಯ ಕ್ರಮೇಣ ಕುಸಿಯುತ್ತಿದೆ. ಕೆರೆಗಳ ಮತ್ತೊಂದು ಪ್ರಮುಖ ಸಮಸ್ಯೆಯಾಗಿ ಮಣ್ಣಿನ ತುಂಬಿಕೆ ಕಾಣಿಸಿಕೊಂಡಿದೆ. ಮೇಲ್ಭಾಗದ ಪ್ರದೇಶಗಳಲ್ಲಿ ಮಣ್ಣಿನ ಕಟಾವು ಹೆಚ್ಚಾದ ಕಾರಣ, ಮಳೆನೀರಿನೊಂದಿಗೆ ಮಣ್ಣು ಕೆರೆಗೆ ಸೇರಿ ಅದರ ಆಳವನ್ನು ಕಡಿಮೆ ಮಾಡುತ್ತಿದೆ. ಪರಂಪರೆಯಾಗಿ ನಡೆದುಕೊಂಡು ಬಂದ ವಾರ್ಷಿಕ ಕೆರೆ ತೋಳೆಯುವ ಸಂಪ್ರದಾಯ ಕ್ಷೀಣಿಸಿದ ಹಿನ್ನೆಲೆಯಲ್ಲಿ, ಈ ಮಣ್ಣು ಕೆರೆಗಳಲ್ಲಿ ಉಳಿದುಕೊಂಡು ನೀರು ಸಂಗ್ರಹಣಾ ಸಾಮರ್ಥ್ಯವನ್ನು ತೀವ್ರವಾಗಿ ಹಾನಿಗೊಳಿಸಿದೆ. ಇದರ ಪರಿಣಾಮವಾಗಿ ಮಳೆಗಾಲದ ಹೊರತು ಉಳಿದ ಕಾಲದಲ್ಲಿ ಕೆರೆಗಳು ಒಣಗಿಹೋಗುವ ಸ್ಥಿತಿ ಉಂಟಾಗಿದೆ. ಆಧುನಿಕ ಆಡಳಿತಾತ್ಮಕ ವ್ಯವಸ್ಥೆಗಳಲ್ಲಿ ಕೆರೆಗಳ ನಿರ್ವಹಣೆ ಸ್ಪಷ್ಟ

ಜವಾಬ್ದಾರಿಯ ಕೊರತೆಯನ್ನು ಅನುಭವಿಸುತ್ತಿದೆ. ಪಂಚಾಯತ್, ನೀರಾವರಿ ಇಲಾಖೆ ಮತ್ತು ಇತರ ಸಂಸ್ಥೆಗಳ ನಡುವೆ ಸಮನ್ವಯದ ಕೊರತೆಯಿಂದಾಗಿ ನಿಯಮಿತ ದುರಸ್ತಿ, ಬಂಡ್ ಬಲಪಡಿಕೆ ಮತ್ತು ತೂಬುಗಳ ಸಂರಕ್ಷಣೆಯೂ ಸಮರ್ಪಕವಾಗಿ ನಡೆಯುತ್ತಿಲ್ಲ. ಜೊತೆಗೆ, ಹಣಕಾಸು ಅನುದಾನಗಳ ವಿಳಂಬ ಮತ್ತು ತಾಂತ್ರಿಕ ಸಿಬ್ಬಂದಿಯ ಕೊರತೆ ಕೂಡ ನಿರ್ವಹಣಾ ಸಮಸ್ಯೆಯನ್ನು ಗಂಭೀರಗೊಳಿಸಿದೆ. ಯಳಂದೂರು ತಾಲೂಕಿನ ಕೆರೆ ಸಂಸ್ಕೃತಿಯ ಪ್ರಮುಖ ಶಕ್ತಿಯಾಗಿದ್ದ ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆ ಇಂದು ಕ್ಷೀಣಿಸುತ್ತಿರುವುದು ಅತ್ಯಂತ ಚಿಂತಾಜನಕವಾಗಿದೆ. ಕೆರೆ ನಿರ್ಮಾಣ, ನೀರಿನ ಹಂಚಿಕೆ, ಮಳೆಯ ಅಂದಾಜು ಮತ್ತು ನಿರ್ವಹಣಾ ವಿಧಾನಗಳಿಗೆ ಸಂಬಂಧಿಸಿದ ಸ್ಥಳೀಯ ಅನುಭವ ಮತ್ತು ಜ್ಞಾನ ಹೊಸ ತಲೆಮಾರಿಗೆ ಸರಿಯಾಗಿ ವರ್ಗಾವಣೆಗೊಳ್ಳುತ್ತಿಲ್ಲ. ಶಿಕ್ಷಣ, ಉದ್ಯೋಗ ಮತ್ತು ಜೀವನಶೈಲಿಯ ಬದಲಾವಣೆಗಳಿಂದಾಗಿ ಯುವಜನರು ಈ ಪರಂಪರೆಯೊಂದಿಗೆ ದೂರವಾಗುತ್ತಿದ್ದಾರೆ. ಈ ಎಲ್ಲ ಸಮಸ್ಯೆಗಳು ಸೇರಿ ಯಳಂದೂರು ತಾಲೂಕಿನ ಕೆರೆಕಟ್ಟೆಗಳ ಮೇಲೆ ಬಹುಮಟ್ಟದ ಒತ್ತಡವನ್ನು ಉಂಟುಮಾಡಿವೆ. ಕೆರೆಗಳು ತಮ್ಮ ಮೂಲ ಕಾರ್ಯಕ್ಷಮತೆಯನ್ನು ಕಳೆದುಕೊಳ್ಳುತ್ತಿರುವುದಲ್ಲದೆ, ಅವುಗಳೊಂದಿಗೆ ಸಂಬಂಧಿಸಿದ್ದ ಸಾಮಾಜಿಕ ಒಗ್ಗಟ್ಟು, ಸಾಂಸ್ಕೃತಿಕ ಆಚರಣೆಗಳು ಮತ್ತು ಜನಪದ ನಂಬಿಕೆಗಳೂ ನಿಧಾನವಾಗಿ ಕ್ಷೀಣಿಸುತ್ತಿವೆ. ಹೀಗಾಗಿ, ಈ ಸವಾಲುಗಳನ್ನು ತಾಂತ್ರಿಕ ಸಮಸ್ಯೆಗಳಾಗಿ ಮಾತ್ರ ನೋಡದೆ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಕಷ್ಟಗಳಾಗಿ ಪರಿಗಣಿಸುವ ಅಗತ್ಯವಿದೆ.

ಕೆರೆಗಳ ನಿರ್ಮಾಣದಲ್ಲಿ ಸ್ಥಳೀಯ ಭೂಗೋಳದ ಸೂಕ್ಷ್ಮ ಅರಿವು, ತಾಂತ್ರಿಕ ಜ್ಞಾನ ಮತ್ತು ದೀರ್ಘಕಾಲಿಕ ದೃಷ್ಟಿಕೋನ ಪ್ರತಿಬಿಂಬಿತವಾಗಿದೆ. ಬಂಡ್‌ಗಳ ನಿರ್ಮಾಣ, ತೂಬು ಮತ್ತು ಕಾಲುವೆಗಳ ಜಾಲ ಮತ್ತು ನೀರಿನ ನಿಯಂತ್ರಣ ವ್ಯವಸ್ಥೆಗಳು ಸ್ಥಳೀಯ ಜನರ ಅನುಭವಾಧಾರಿತ ತಂತ್ರಜ್ಞಾನಗಳ ಸೃಜನಶೀಲತೆಯನ್ನು ಪ್ರತಿಪಾದಿಸುತ್ತವೆ. ಜೊತೆಗೆ ಜನಸಮುದಾಯ ಆಧಾರಿತ ನಿರ್ವಹಣಾ ವ್ಯವಸ್ಥೆಗಳು ಗ್ರಾಮಸ್ಥರ ನಡುವೆ ಸಹಕಾರ, ಹೊಣೆಗಾರಿಕೆ ಮತ್ತು ಸಾಮಾಜಿಕ ಶಿಸ್ತನ್ನು ಬೆಳೆಸಿದವು. ಆದರೆ, ಆಧುನಿಕ ಕಾಲಮಾನದ ಆಡಳಿತಾತ್ಮಕ ಬದಲಾವಣೆಗಳು, ಭೂ ಅತಿಕ್ರಮಣ, ಮಣ್ಣಿನ ತುಂಬಿಕೆ, ನಿರ್ವಹಣೆಯ ಕೊರತೆ ಮತ್ತು ಸಾಂಪ್ರದಾಯಿಕ ಜ್ಞಾನ ಕ್ಷೀಣತೆ ಇತ್ಯಾದಿ ಸಮಸ್ಯೆಗಳು ಯಳಂದೂರು ತಾಲೂಕಿನ ಕೆರೆ ಸಂಸ್ಕೃತಿಗೆ ಗಂಭೀರ ಸವಾಲುಗಳಾಗಿ ಪರಿಣಮಿಸಿವೆ. ಇದರಿಂದ ಕೆರೆಗಳು ತಮ್ಮ ಭೌತಿಕ ಕಾರ್ಯಕ್ಷಮತೆಯನ್ನು ಮಾತ್ರವಲ್ಲದೆ, ಅವುಗಳೊಂದಿಗೆ ಬೆಸೆದುಕೊಂಡಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನೂ ನಿಧಾನವಾಗಿ ಕಳೆದುಕೊಳ್ಳುವ ಸ್ಥಿತಿ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಯಳಂದೂರು ತಾಲೂಕಿನ ಕೆರೆಕಟ್ಟೆಗಳನ್ನು ಉಳಿಸಿ ಅಭಿವೃದ್ಧಿಪಡಿಸುವ ಕಾರ್ಯವು ಕೇವಲ ತಾಂತ್ರಿಕ ಪುನಶ್ಚೇತನಕ್ಕೆ ಸೀಮಿತವಾಗಿರದೆ, ಸಾಂಪ್ರದಾಯಿಕ ಸಮುದಾಯ ಆಧಾರಿತ ನಿರ್ವಹಣಾ ತತ್ವಗಳು ಮತ್ತು ಆಧುನಿಕ ವಿಜ್ಞಾನ–ತಂತ್ರಜ್ಞಾನಗಳ ಸಮನ್ವಯದ ಮೇಲೆ ಅವಲಂಬಿತವಾಗಿರಬೇಕು. ಸ್ಥಳೀಯ

ಸಮುದಾಯದ ಸಕ್ರಿಯ ಪಾಲ್ಗೊಳ್ಳುವಿಕೆ, ಪರಂಪರೆಯ ಜ್ಞಾನ ಸಂರಕ್ಷಣೆ ಮತ್ತು ಸಮರ್ಪಕ ಆಡಳಿತಾತ್ಮಕ ಬೆಂಬಲದ ಮೂಲಕ ಮಾತ್ರ ಈ ಕೆರೆ ಸಂಸ್ಕೃತಿಯನ್ನು ದೀರ್ಘಕಾಲಿಕವಾಗಿ ಉಳಿಸಿಕೊಳ್ಳಲು ಸಾಧ್ಯವೆಂದು ಈ ಅಧ್ಯಯನ ಸೂಚಿಸುತ್ತದೆ. ಹೀಗಾಗಿ, ಯಳಂದೂರು ತಾಲೂಕಿನ ಕೆರೆಕಟ್ಟೆಗಳು ಭೂತಕಾಲದ ಪರಂಪರೆಯಾಗಿ ಮಾತ್ರವಲ್ಲದೆ, ಭವಿಷ್ಯದ ಸ್ಥಿರ ಜಲ ನಿರ್ವಹಣೆಗೆ ಮಾರ್ಗದರ್ಶಕ ಮಾದರಿಗಳಾಗಿ ಪರಿಗಣಿಸಬೇಕಾದ ಅಗತ್ಯವಿದೆ.

ಯಳಂದೂರು ತಾಲ್ಲೂಕಿನ ಕೆರೆಗಳು ಕೇವಲ ಭೌತಿಕ ಜಲಸಂಗ್ರಹಣಾ ವ್ಯವಸ್ಥೆಗಳಾಗಿರದೆ, ಗ್ರಾಮೀಣ ಜನಸಮಾಜದ ಆಡಳಿತ, ಸಹಕಾರ ಮತ್ತು ಸಾಮಾಜಿಕ ನ್ಯಾಯದ ಕೇಂದ್ರಗಳಾಗಿದ್ದು, ಸಂಪ್ರದಾಯಿಕವಾಗಿ ಕೆರೆಗಳ ನಿರ್ವಹಣೆಯಲ್ಲಿ ಗ್ರಾಮ ಸಭೆಗಳು ಪ್ರಮುಖ ಪಾತ್ರವಹಿಸುತ್ತಿದ್ದವು. ಕೆರೆಯ ಸ್ಥಿತಿ, ಬಂಡ್ ದುರಸ್ತಿ, ತೂಬುಗಳ ಸಂರಕ್ಷಣೆ, ನೀರಿನ ಹಂಚಿಕೆ ಮತ್ತು ನಿಯಮ ಉಲ್ಲಂಘನೆಗಳಿಗೆ ಸಂಬಂಧಿಸಿದ ತೀರ್ಮಾನಗಳನ್ನು ಗ್ರಾಮ ಸಭೆಗಳಲ್ಲೇ ಕೈಗೊಳ್ಳಲಾಗುತ್ತಿತ್ತು. ಹಿರಿಯರು, ಅನುಭವಸ್ಥ ರೈತರು ಮತ್ತು ಸ್ಥಳೀಯ ನಾಯಕರು ಸಭೆಗಳಲ್ಲಿ ಭಾಗವಹಿಸಿ, ಒಮ್ಮತದ ಆಧಾರದಲ್ಲಿ ನಿರ್ಣಯಗಳನ್ನು ರೂಪಿಸುತ್ತಿದ್ದರು. ಈ ವ್ಯವಸ್ಥೆಯ ವಿಶೇಷತೆ ಎಂದರೆ, ಅದು ಮೇಲಿನಿಂದ ಹೇರಲ್ಪಟ್ಟ ಆಡಳಿತವಲ್ಲದೆ, ಸಾಮೂಹಿಕ ಒಪ್ಪಿಗೆಯ ಮೇಲೆ ಆಧಾರಿತ ಆಡಳಿತ ಮಾದರಿಯಾಗಿತ್ತು. ಇದರಿಂದ ಗ್ರಾಮಸ್ಥರಲ್ಲಿ ಹೊಣೆಗಾರಿಕೆ ಮತ್ತು ಪಾಲ್ಗೊಳ್ಳುವಿಕೆಯ ಭಾವನೆ ಗಟ್ಟಿಯಾಗುತ್ತಿತ್ತು.

ಕೆರೆ ನೀರಿನ ಹಂಚಿಕೆ ಸಾಂಪ್ರದಾಯಿಕ ನಿರ್ವಹಣಾ ವ್ಯವಸ್ಥೆಯ ಅತ್ಯಂತ ಸೂಕ್ಷ್ಮ ಮತ್ತು ಮಹತ್ವದ ಅಂಶವಾಗಿತ್ತು. ನೀರಿನ ಕೊರತೆ ಇರುವ ಪರಿಸ್ಥಿತಿಯಲ್ಲಿ ಸಹ, ಎಲ್ಲಾ ರೈತರಿಗೆ ಸಮಾನ ಅವಕಾಶ ದೊರೆಯುವಂತೆ ಸ್ಪಷ್ಟ ಮತ್ತು ಕಟ್ಟುನಿಟ್ಟಾದ ನಿಯಮಗಳು ರೂಪಿಸಲ್ಪಟ್ಟಿದ್ದವು. ನೀರು ಹರಿಯುವ ಸಮಯ, ಕ್ರಮ ಮತ್ತು ಪ್ರಮಾಣವನ್ನು ಪೂರ್ವನಿರ್ಧಾರಿತವಾಗಿ ನಿಗದಿಪಡಿಸಲಾಗುತ್ತಿತ್ತು. ಸಾಮಾನ್ಯವಾಗಿ ಮೇಲ್ದಂಡೆಯ ರೈತರು ಕೆಳಭಾಗದ ರೈತರ ಹಕ್ಕನ್ನು ಹಾನಿಗೊಳಿಸದಂತೆ ನಿಯಂತ್ರಣ ವಿಧಿಸಲಾಗುತ್ತಿತ್ತು. ನಿಯಮ ಉಲ್ಲಂಘಿಸಿದವರಿಗೆ ದಂಡ ಅಥವಾ ಸಾಮಾಜಿಕ ತಿರಸ್ಕಾರದಂತಹ ಶಿಕ್ಷೆಗಳೂ ಇದ್ದವು. ಈ ಕ್ರಮಗಳು ನೀರಿನ ಬಳಕೆಯಲ್ಲಿ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಶಿಸ್ತು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಪ್ರತಿವರ್ಷ ಮಳೆಗಾಲಕ್ಕೆ ಮುನ್ನ ನಡೆಯುತ್ತಿದ್ದ ಕೆರೆ ತೊಳೆಯುವ ಸಂಪ್ರದಾಯ ಸಾಂಪ್ರದಾಯಿಕ ನಿರ್ವಹಣಾ ವ್ಯವಸ್ಥೆಯ ಹೃದಯಭಾಗವಾಗಿತ್ತು. ಇದು ಕೇವಲ ತಾಂತ್ರಿಕ ಕಾರ್ಯವಲ್ಲದೆ, ಒಂದು ಸಾಮಾಜಿಕ ಆಚರಣೆಯ ಸ್ವರೂಪವನ್ನು ಹೊಂದಿತ್ತು. ಗ್ರಾಮಸ್ಥರು ಜಾತಿ ಮತ್ತು ವರ್ಗ ಭೇದವಿಲ್ಲದೆ ಸಾಮೂಹಿಕವಾಗಿ ಶ್ರಮ ನೀಡುತ್ತಿದ್ದರು. ಕೆರೆಗಳಿಂದ ತೆಗೆಯಲಾದ ಮಣ್ಣನ್ನು ಕೃಷಿಭೂಮಿಗೆ ಬಳಸುವುದರಿಂದ ಭೂಮಿಯ ಫಲವತ್ತತೆ ಹೆಚ್ಚುತ್ತಿತ್ತು. ಈ ಮೂಲಕ ಕೆರೆ ಮತ್ತು ಕೃಷಿ ಪರಸ್ಪರ

ಅವಲಂಬಿತ ವ್ಯವಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಈ ಸಾಮೂಹಿಕ ಶ್ರಮವು ಗ್ರಾಮೀಣ ಸಮಾಜದಲ್ಲಿ ಏಕತೆ, ಪರಸ್ಪರ ಅವಲಂಬನೆ ಮತ್ತು ಸಹಕಾರದ ಮೌಲ್ಯಗಳನ್ನು ಬಲಪಡಿಸುತ್ತಿತ್ತು. ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಕೆರೆಗಳ ನಿರ್ವಹಣೆಗೆ ಸಂಬಂಧಿಸಿದ ಜವಾಬ್ದಾರಿಗಳನ್ನು ವಿಭಿನ್ನ ವ್ಯಕ್ತಿಗಳು ಅಥವಾ ಸಮುದಾಯ ಗುಂಪುಗಳಿಗೆ ವಹಿಸಲಾಗುತ್ತಿತ್ತು. ಕೆಲವರು ಬಂಡ್‌ಗಳ ಮೇಲ್ವಿಚಾರಣೆಗೆ, ಇನ್ನೂ ಕೆಲವರು ತೂಬು–ಕಾಲುವೆಗಳ ಸಂರಕ್ಷಣೆಗೆ ಹೊಣೆಗಾರರಾಗುತ್ತಿದ್ದರು. ಈ ರೀತಿಯ ಜವಾಬ್ದಾರಿ ಹಂಚಿಕೆ ವ್ಯವಸ್ಥೆ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ನಡೆಸಲು ಸಹಕಾರಿಯಾಗಿತ್ತು. ಕೆರೆಗಳ ನಿರ್ವಹಣೆ ಅನೇಕ ಸಂದರ್ಭಗಳಲ್ಲಿ ಹಬ್ಬ–ಜಾತ್ರೆಗಳು, ದೇವತಾ ಆರಾಧನೆಗಳು ಮತ್ತು ಜನಪದ ನಂಬಿಕೆಗಳೊಂದಿಗೆ ಬೆಸೆದುಕೊಂಡಿತ್ತು. ಕೆರೆ ದೇವರು ಅಥವಾ ಗ್ರಾಮ ದೇವಿಯ ಆರಾಧನೆಯ ಮೂಲಕ ಕೆರೆ ಸಂರಕ್ಷಣೆಗೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಮಾನ್ಯತೆ ದೊರಕುತ್ತಿತ್ತು. ಇದರಿಂದ ಕೆರೆಗಳಿಗೆ ಹಾನಿ ಮಾಡುವುದನ್ನು ಪಾಪದಂತೆ ಕಾಣುವ ಮನೋಭಾವ ಸಮಾಜದಲ್ಲಿ ಬೆಳೆದು, ಸಂರಕ್ಷಣೆಗೆ ಸಹಕಾರಿಯಾಗಿತ್ತು. ಈ ಸಾಂಪ್ರದಾಯಿಕ ನಿರ್ವಹಣಾ ವ್ಯವಸ್ಥೆಯ ಪ್ರಮುಖ ಸಾಧನೆಯೆಂದರೆ, ಅದು ಕಡಿಮೆ ಸಂಪನ್ಮೂಲಗಳಲ್ಲಿ ದೀರ್ಘಕಾಲಿಕ ಜಲ ನಿರ್ವಹಣೆಯನ್ನು ಸಾಧ್ಯವಾಗಿಸಿತು. ಜೊತೆಗೆ, ಇದು ಗ್ರಾಮೀಣ ಸಮಾಜದಲ್ಲಿ ಸಾಮಾಜಿಕ ನ್ಯಾಯ, ಸಹಭಾಗಿತ್ವ ಮತ್ತು ಪರಿಸರ ಅರಿವನ್ನು ಉತ್ತೇಜಿಸಿತು. ಆಧುನಿಕ ಕಾಲಮಾನದಲ್ಲಿ ಈ ವ್ಯವಸ್ಥೆಗಳು ಕ್ಷೀಣಿಸುತ್ತಿದ್ದರೂ, ಅವುಗಳ ತತ್ವಗಳು ಇಂದಿಗೂ ಜಲ ಸಂರಕ್ಷಣೆಯ ದೃಷ್ಟಿಯಿಂದ ಅತ್ಯಂತ ಪ್ರಾಸಂಗಿಕವಾಗಿವೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಡೆದ ವೇಗವಾದ ಸಾಮಾಜಿಕ–ಆರ್ಥಿಕ ಪರಿವರ್ತನೆಗಳು ಯಳಂದೂರು ತಾಲ್ಲೂಕಿನ ಕೆರೆಕಟ್ಟೆ ಸಂಸ್ಕೃತಿಯ ಮೇಲೆ ಆಳವಾದ ಪರಿಣಾಮವನ್ನು ಉಂಟುಮಾಡಿವೆ. ನಗರೀಕರಣ, ಕೈಗಾರೀಕರಣ ಮತ್ತು ಭೂ ಬಳಕೆಯ ಮಾದರಿಗಳ ಬದಲಾವಣೆಗಳಿಂದಾಗಿ, ಶತಮಾನಗಳ ಕಾಲ ಗ್ರಾಮೀಣ ಬದುಕಿನ ಆಧಾರವಾಗಿದ್ದ ಅನೇಕ ಕೆರೆಗಳು ಇಂದು ನಾಶವಾಗುವ ಅಥವಾ ತಮ್ಮ ಕಾರ್ಯಕ್ಷಮತೆಯನ್ನು ಕಳೆದುಕೊಳ್ಳುವ ಸ್ಥಿತಿಗೆ ತಲುಪಿವೆ.

ಆಧುನಿಕ ಆಡಳಿತ ವ್ಯವಸ್ಥೆಯಲ್ಲಿ ಕೆರೆಗಳ ನಿರ್ವಹಣೆ ಹಲವು ಇಲಾಖೆಗಳಿಗೆ ಹಂಚಲ್ಪಟ್ಟಿರುವುದರಿಂದ ಜವಾಬ್ದಾರಿಗಳ ಅಸ್ಪಷ್ಟತೆ ಕಂಡುಬರುತ್ತದೆ. ಪಂಚಾಯತ್, ನೀರಾವರಿ ಇಲಾಖೆ ಮತ್ತು ನಗರಾಭಿವೃದ್ಧಿ ಸಂಸ್ಥೆಗಳ ನಡುವೆ ಸಮನ್ವಯದ ಕೊರತೆ ಪರಿಣಾಮಕಾರಿ ನಿರ್ವಹಣೆಗೆ ಅಡ್ಡಿಯಾಗುತ್ತಿದೆ. ಜೊತೆಗೆ, ಅನುದಾನಗಳ ಕೊರತೆ, ತಾಂತ್ರಿಕ ಪರಿಣತಿಯ ಅಭಾವ ಮತ್ತು ಯೋಜನೆಗಳ ಅನುಷ್ಠಾನದಲ್ಲಿ ವಿಳಂಬವೂ ಸವಾಲುಗಳಾಗಿವೆ. ಆಧುನಿಕ ಬದಲಾವಣೆಗಳಿಂದ ಉಂಟಾದ ಅತ್ಯಂತ ಗಂಭೀರ ಸಮಸ್ಯೆಯೆಂದರೆ; ಕೆರೆ ನಿರ್ಮಾಣ, ನಿರ್ವಹಣೆ, ನೀರಿನ ಹಂಚಿಕೆ ಮತ್ತು ಪರಿಸರ ಸಮತೋಲನಕ್ಕೆ ಸಂಬಂಧಿಸಿದ ಸ್ಥಳೀಯ ಜ್ಞಾನವು ಹೊಸ ತಲೆಮಾರಿಗೆ ಸಮರ್ಪಕವಾಗಿ ವರ್ಗಾವಣೆಯಾಗುತ್ತಿಲ್ಲ. ಶಿಕ್ಷಣ ಮತ್ತು ಉದ್ಯೋಗದ ಕಾರಣದಿಂದ ಗ್ರಾಮೀಣ ಯುವಜನರು ನಗರಗಳತ್ತ

ಮುಖ ಮಾಡುತ್ತಿರುವುದು ಈ ಪ್ರಕ್ರಿಯೆಯನ್ನು ಮತ್ತಷ್ಟು ತೀವ್ರಗೊಳಿಸಿದೆ. ಕೆರೆಗಳ ನಾಶ ಅಥವಾ ನಿರ್ಲಕ್ಷ್ಯವು ಕೇವಲ ಜಲ ಸಮಸ್ಯೆಯಲ್ಲದೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳಿಗೂ ಕಾರಣವಾಗಿದೆ. ಕೆರೆಗಳಿಗೆ ಸಂಬಂಧಿಸಿದ್ದ ಹಬ್ಬ–ಜಾತ್ರೆಗಳು, ಜನಪದ ಆಚರಣೆಗಳು ಮತ್ತು ಜನಸಮುದಾಯ ಆಧಾರಿತ ಚಟುವಟಿಕೆಗಳು ನಿಧಾನವಾಗಿ ಅಸ್ತಿತ್ವ ಕಳೆದುಕೊಳ್ಳುತ್ತಿವೆ. ಇದರಿಂದ ಗ್ರಾಮೀಣ ಜನಸಮಾಜದ ಒಗ್ಗಟ್ಟು ಮತ್ತು ಸಹಭಾಗಿತ್ವದ ಮೌಲ್ಯಗಳು ಕುಸಿಯುತ್ತಿರುವುದು ಗಮನಾರ್ಹವಾಗಿದೆ. ಈ ಎಲ್ಲ ಬದಲಾವಣೆಗಳು ಸೇರಿ ಯಳಂದೂರು ತಾಲ್ಲೂಕಿನ ಕೆರೆ ಸಂಸ್ಕೃತಿಯನ್ನು ಸಂಕಷ್ಟದ ಹಂತಕ್ಕೆ ತಳ್ಳಿವೆ. ಆಧುನಿಕ ಅಭಿವೃದ್ಧಿಯ ಅವಶ್ಯಕತೆ ಮತ್ತು ಪರಿಸರ ಸಂರಕ್ಷಣೆಯ ನಡುವಿನ ಸಮತೋಲನ ಸಾಧಿಸುವುದು ಇಂದಿನ ಪ್ರಮುಖ ಸವಾಲಾಗಿದೆ. ಹೀಗಾಗಿ, ಈ ಸಮಸ್ಯೆಗಳನ್ನು ತಾಂತ್ರಿಕ ಅಥವಾ ಆಡಳಿತಾತ್ಮಕ ಅಸಮರ್ಪಕತೆಯಾಗಿ ಮಾತ್ರ ನೋಡದೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಕಷ್ಟಗಳಾಗಿ ಪರಿಗಣಿಸುವುದು ಅಗತ್ಯವಾಗಿದೆ.

ಯಳಂದೂರು ತಾಲ್ಲೂಕಿನ ಕೆರೆಕಟ್ಟೆಗಳು ದಕ್ಷಿಣ ಕರ್ನಾಟಕದ ಒಣ ಹಾಗೂ ಅರೆ–ಒಣ ಪ್ರದೇಶಗಳಲ್ಲಿ ರೂಪುಗೊಂಡ ವಿಶಿಷ್ಟ ಜಲ ಸಂಸ್ಕೃತಿಯ ಪ್ರತಿನಿಧಿಗಳಾಗಿವೆ. ಶತಮಾನಗಳ ಕಾಲ ಈ ಕೆರೆಗಳು ಕೇವಲ ನೀರಿನ ಸಂಗ್ರಹಣಾ ವ್ಯವಸ್ಥೆಗಳಾಗಿರದೆ, ಗ್ರಾಮೀಣ ಸಮಾಜದ ಆರ್ಥಿಕ ಬದುಕು, ಸಾಮಾಜಿಕ ಸಂಘಟನೆ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿಗಳ ಕೇಂದ್ರಗಳಾಗಿ ಕಾರ್ಯನಿರ್ವಹಿಸಿವೆ. ಯಳಂದೂರು ತಾಲ್ಲೂಕಿನ ಕೆರೆಕಟ್ಟೆಗಳು ಸ್ಥಳೀಯ ಜ್ಞಾನ, ಪರಿಸರ ಅರಿವು ಮತ್ತು ಜನಸಮುದಾಯ ಸಹಕಾರದ ಅತ್ಯುತ್ತಮ ಉದಾಹರಣೆಗಳಾಗಿವೆ. ಮಳೆಯ ಅಸಮ ವಿತರಣೆಯಂತಹ ಪ್ರಕೃತಿ ಸವಾಲುಗಳಿಗೆ ಪ್ರತಿಕ್ರಿಯೆಯಾಗಿ ರೂಪುಗೊಂಡ ಈ ವ್ಯವಸ್ಥೆಗಳು, ಕಡಿಮೆ ಸಂಪನ್ಮೂಲಗಳಲ್ಲಿ ದೀರ್ಘಕಾಲಿಕ ಜಲ ನಿರ್ವಹಣೆಯನ್ನು ಸಾಧ್ಯವಾಗಿಸಿದ್ದವು. ಗ್ರಾಮ ಸಭೆಗಳು, ನೀರಿನ ಹಂಚಿಕೆಯ ನಿಯಮಗಳು ಮತ್ತು ಕೆರೆ ತೊಳೆಯುವ ಸಾಮೂಹಿಕ ಶ್ರಮ ಸಂಪ್ರದಾಯಗಳು ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಸಹಭಾಗಿತ್ವವನ್ನು ಉತ್ತೇಜಿಸಿವೆ. ಆದರೆ, ಆಧುನಿಕ ಕಾಲಮಾನದ ನಗರೀಕರಣ, ಕೈಗಾರೀಕರಣ, ಭೂ ಬಳಕೆಯ ಬದಲಾವಣೆಗಳು ಮತ್ತು ಆಡಳಿತಾತ್ಮಕ ಅಸಮರ್ಪಕತೆಗಳಿಂದಾಗಿ ಅನೇಕ ಕೆರೆಗಳು ಇಂದು ನಾಶವಾಗುತ್ತಿರುವ ಅಥವಾ ತಮ್ಮ ಮೂಲ ಕಾರ್ಯಕ್ಷಮತೆಯನ್ನು ಕಳೆದುಕೊಳ್ಳುತ್ತಿರುವ ಸ್ಥಿತಿಗೆ ತಲುಪಿವೆ. ಜೊತೆಗೆ, ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಯ ಕ್ಷೀಣತೆ ಮತ್ತು ಸಮುದಾಯದ ನೇರ ಪಾಲ್ಗೊಳ್ಳುವಿಕೆಯ ಕುಸಿತವು ಕೆರೆ ಸಂಸ್ಕೃತಿಯ ಮುಂದುವರಿಕೆಗೆ ಗಂಭೀರ ಸವಾಲುಗಳಾಗಿ ಪರಿಣಮಿಸಿವೆ. ಈ ಹಿನ್ನೆಲೆಯಲ್ಲಿ ಕೆರೆಗಳ ಸಮಸ್ಯೆಯನ್ನು ಕೇವಲ ತಾಂತ್ರಿಕ ಅಥವಾ ನೀರಾವರಿ ಸಮಸ್ಯೆಯಾಗಿ ಮಾತ್ರ ನೋಡದೆ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಕಷ್ಟದ ರೂಪದಲ್ಲಿಯೂ ಪರಿಗಣಿಸುವ ಅಗತ್ಯವಿದೆ.

ಕೆರೆಕಟ್ಟೆಗಳು ಜಲಸಂಪನ್ಮೂಲಗಳಷ್ಟೇ ಅಲ್ಲದೆ, ಗ್ರಾಮೀಣ ಜನಸಮಾಜದ ಸಾಂಸ್ಕೃತಿಕ ಪರಂಪರೆಯ ಜೀವಂತ ಸಾಕ್ಷಿಗಳಾಗಿವೆ. ಸಾಂಪ್ರದಾಯಿಕ ಜನಸಮುದಾಯ ಆಧಾರಿತ ನಿರ್ವಹಣಾ ವ್ಯವಸ್ಥೆಗಳು ದೀರ್ಘಕಾಲಿಕ ಮತ್ತು ನ್ಯಾಯಸಮ್ಮತವಾಗಿದ್ದವು. ಆಧುನಿಕ ಆಡಳಿತ ವ್ಯವಸ್ಥೆಗಳಲ್ಲಿ ಸಮನ್ವಯದ ಕೊರತೆ ಕೆರೆಗಳ ಪರಿಣಾಮಕಾರಿ ನಿರ್ವಹಣೆಗೆ ಅಡ್ಡಿಯಾಗಿದೆ. ಸಾಂಪ್ರದಾಯಿಕ ಜ್ಞಾನವನ್ನು ಸಂರಕ್ಷಿಸದೆ, ಕೇವಲ ಆಧುನಿಕ ತಂತ್ರಜ್ಞಾನಗಳ ಮೇಲೆ ಅವಲಂಬಿಸುವುದು ಸಮರ್ಪಕ ಪರಿಹಾರವಾಗುವುದಿಲ್ಲ. ಜನಸಮುದಾಯ ಪಾಲ್ಗೊಳ್ಳುವಿಕೆ ಪುನರುಜ್ಜೀವನವು ಗ್ರಾಮ ಸಭೆಗಳು ಮತ್ತು ಸ್ಥಳೀಯ ಸಮಿತಿಗಳ ಮೂಲಕ ಸಮುದಾಯದ ನೇರ ಪಾಲ್ಗೊಳ್ಳುವಿಕೆಯನ್ನು ಪುನರ್ ಸ್ಥಾಪಿಸಬೇಕು. ಸಾಂಪ್ರದಾಯಿಕ ಜ್ಞಾನ ಸಂರಕ್ಷಣೆಯು ಹಿರಿಯರ ಅನುಭವ ಮತ್ತು ಸ್ಥಳೀಯ ಜ್ಞಾನವನ್ನು ದಾಖಲಿಸಿ, ಮುಂದಿನ ತಲೆಮಾರಿಗೆ ವರ್ಗಾಯಿಸುವ ಕ್ರಮಗಳನ್ನು ಕೈಗೊಳ್ಳಬೇಕು. ಆಧುನಿಕ ತಂತ್ರಜ್ಞಾನಗಳ ಸಮನ್ವಯೂ ಕೂಡ ಸಿಲ್ಟ್ ತೆಗೆಯುವ ಯಂತ್ರೋಪಕರಣಗಳು, ಜಿಐಎಸ್ ನಕ್ಷೆಕರಣ ಮತ್ತು ವೈಜ್ಞಾನಿಕ ನಿರ್ವಹಣಾ ವಿಧಾನಗಳನ್ನು ಪರಂಪರ ವ್ಯವಸ್ಥೆಗಳೊಂದಿಗೆ ಸಂಯೋಜಿಸಬೇಕು. ಅತಿಕ್ರಮಣ ತಡೆ ಮತ್ತು ಕಾನೂನು ರಕ್ಷಣೆಯು ಕೆರೆಗಳ ಗಡಿ ಗುರುತು, ದಾಖಲೆ ಮತ್ತು ಕಾನೂನು ಸಂರಕ್ಷಣೆಯನ್ನು ಬಲಪಡಿಸಬೇಕು. ಕೆರೆ ಸಂಸ್ಕೃತಿಯ ಮಹತ್ವದ ಬಗೆಗೆ ಶಾಲಾ–ಕಾಲೇಜು ಮಟ್ಟದಲ್ಲೇ ಜಾಗೃತಿ ಮೂಡಿಸಬೇಕು. ಒಟ್ಟಾರೆಯಾಗಿ, ಯಳಂದೂರು ತಾಲ್ಲೂಕಿನ ಕೆರೆಕಟ್ಟೆಗಳು ಭೂತಕಾಲದ ಪರಂಪರೆಯಾಗಿ ಮಾತ್ರವಲ್ಲದೆ, ಭವಿಷ್ಯದ ಸ್ಥಿರ ಜಲ ನಿರ್ವಹಣೆ ಮತ್ತು ಪರಿಸರ ಸಂರಕ್ಷಣೆಗೆ ಮಾರ್ಗದರ್ಶಕ ಮಾದರಿಗಳಾಗಿವೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ತಂತ್ರಜ್ಞಾನಗಳ ಸಮನ್ವಯವೇ ಮುಂದಿನ ದಾರಿ ಎಂಬ ಈ ದೃಷ್ಟಿಕೋನವನ್ನು ಅನುಸರಿಸುವ ಮೂಲಕ ಮಾತ್ರ ಕೆರೆ ಸಂಸ್ಕೃತಿಯನ್ನು ಉಳಿಸಿ, ಮುಂದಿನ ಪೀಳಿಗೆಗಳಿಗೆ ಹಸ್ತಾಂತರಿಸಲು ಸಾಧ್ಯವೆಂದು ಈ ಅಧ್ಯಯನವೂ ಸ್ಪಷ್ಟಪಡಿಸುತ್ತದೆ.

**ಪರಾಮರ್ಶನ ಗ್ರಂಥಗಳು**


1. ದೇವರಾಜ್.ಡಿ, ಕರ್ನಾಟಕದ ನೀರಾವರಿ ಇತಿಹಾಸ, 1996
2. ಚಾಮರಾಜನಗರ ಜಿಲ್ಲಾ ಗ್ಯಾಸೆಟಿಯರ್, 2015
3. ಕರ್ನಾಟಕ ರಾಜ್ಯ ಜಲ ಸಂಪನ್ಮೂಲ ಇಲಾಖೆ, 2020
4. ಹಂಪಯ್ಯ.ಕೆ, ಜನಪದ ಆಚರಣೆಗಳು ಮತ್ತು ಪರಿಸರ, 2010
5. ರಾಜಶೇಖರ.ಎಸ್, ಕರ್ನಾಟಕದ ಗ್ರಾಮೀಣ ಸಮಾಜ ಮತ್ತು ಸಂಸ್ಕೃತಿ, 2005
6. ರಾಜಪ್ಪ.ಎಂ.ಎಸ್, ಗ್ರಾಮೀಣ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ವ್ಯವಸ್ಥೆ, 2008
7. ಚಿದಾನಂದಮೂರ್ತಿ.ಎಂ, ಕರ್ನಾಟಕದ ಜನಪದ ಸಂಸ್ಕೃತಿ, 1998
8. ಪಂಚಾಯತ್ ರಾಜ್ ಇಲಾಖೆ, 2023